

# ಟೆನಿಸ್ ಬೆರಗು ಜೊಕೊವಿಚ್

**ಇಬ್ಬರು ಘಟಾನುಘಟಿ ಸ್ಪರ್ಧಿಗಳ ಜತೆಗೆ ಒಂದೂಕಾಲ ದಶಕ ಏಗುತ್ತಾ, ಮನೋಬಲ ವೃದ್ಧಿಸಿಕೊಂಡು, ಡಯಟ್ ಬದಲಾವಣೆಗೆ ಒಳಗಾಗಿ ಬೆಳೆದಿರುವ ನೊವಾಕ್ ಜೊಕೊವಿಚ್ ಸದ್ಯಕ್ಕೆ ಅದ್ವಿತೀಯ ಟೆನಿಸ್ ತಾರೆ. ಈ ವರ್ಷ ಮೂರು ಗ್ರ್ಯಾಂಡ್ ಸ್ಲ್ಯಾಮ್ ಪ್ರಶಸ್ತಿಗಳನ್ನು ತಮ್ಮದಾಗಿಸಿಕೊಂಡು 1969ರ ನಂತರ ಅಂತಹ ಸಾಧನೆ ಮಾಡಿದ ಆಟಗಾರ ಎಂದೆನಿಸಿಕೊಂಡ ಅವರ ಆಟಪ್ರೀತಿಗೆ ಶರಣೆನ್ನಬೇಕು.**

**■ ವಿಶಾಖ ಎನ್.**



**2014**ರ ವಿಂಬಲ್ಡನ್ ಫೈನಲ್ ರೋಮಾಂಚಕ ಕ್ಷಣಗಳನ್ನು ಒಳಗೊಂಡಿತ್ತು. ನಾಲ್ಕನೇ ಸೆಟ್ 3–3ರಲ್ಲಿ ಸಮನಾಗಿತ್ತು. 30–40ರಿಂದ ನೊವಾಕ್ ಜೊಕೊವಿಚ್ ಹಿಂದಿದ್ದರು. ಎದುರಲ್ಲಿ ಇದ್ದದ್ದು ರೋಜರ್ ಫೆಡರರ್. ಪಳಗಿದ ನುರಿತ ಆಟಗಾರರನ್ನು ಮಹತ್ವದ ಘಟ್ಟದಲ್ಲಿ ಎದುರಿಸುವಾಗ ಮನದಲ್ಲಿ ಎಂತೆಂಥ ಅಲೆಗಳು ಏಳಬಹುದೆನ್ನುವುದನ್ನು ಊಹಿಸಲೂ ಅಸಾಧ್ಯ. ಆ ಅಲೆಗಳು ಬಂದು ಎಲ್ಲೆಲ್ಲಿಗೆ ಕರೆದವೋ, ಜೊಕೊವಿಚ್ ನಡೆದದ್ದು ಗೆಲುವಿನರಮನೆಯೆಡೆಗೆ.

ಆ ಪಂದ್ಯದ ಐದನೇ ಸೆಟ್ ಇನ್ನೂ ರೋಚಕವಾಗಿತ್ತು. 5–2ರಲ್ಲಿ ಜೊಕೊವಿಚ್ ಹಿಂದಿದ್ದರು. ಪ್ರೇಕ್ಷಕರಲ್ಲಿ ಬಹುತೇಕರು ಫೆಡರರ್ ಗೆದ್ದೇಬಿಟ್ಟರು ಎಂದುಕೊಳ್ಳುತ್ತಿರುವಾಗಲೇ ಸರ್ಬಿಯಾದ ಯುವಕನ ಇಡೀ ದೇಹ ಸೂಪರ್‌ಮ್ಯಾನ್‌ನಂತೆ ವರ್ತಿಸತೊಡಗಿತು. ಮನಸ್ಸಿನಲ್ಲಿ ಅದ್ಯಾವ ಪರಿಯ ಉತ್ಕಟತೆ ಇತ್ತೋ, ಗೆಲುವನ್ನು ಅನುಭವಿ ಆಟಗಾರನಿಗೆ ನಿರಾಕರಿಸಲೇಬೇಕು ಎಂಬ ಸಂಕಲ್ಪ ಅವರ ಒಂದೊಂದು ಕದಲಿಕೆಯಲ್ಲೂ ವ್ಯಕ್ತವಾಯಿತು.

ಈ ಸಲ ಜೊಕೊವಿಚ್ ವಿಂಬಲ್ಡನ್ ಚಾಂಪಿಯನ್ ಆಗುವ ಮೂಲಕ 20 ಗ್ರ್ಯಾಂಡ್ ಸ್ಲ್ಯಾಮ್ ಪ್ರಶಸ್ತಿ ಗೆದ್ದ ದಿಗ್ಗಜರ ಪರಿಧಿಗೆ ಸೇರಿಕೊಂಡರು. ರೋಜರ್ ಫೆಡರರ್, ರಫೆಲ್ ನಡಾಲ್ ಆ ಪರಿಧಿಯೊಳಗೆ ಈಗಾಗಲೇ ಇರುವ ಇನ್ನಿಬ್ಬರು.

ವಿಂಬಲ್ಡನ್ ಫೈನಲ್‌ನಲ್ಲಿ ರೋಮ್‌ನ ಮಟಿಯೊ ಬೆರೆಟಿನಿ 16 ಏಸ್‌ಗಳನ್ನು ಹಾಕಿದರು. ಜೊಕೊವಿಚ್ ಪ್ರಯೋಗಿಸಿದ್ದು ಆರು ಏಸ್‌ಗಳನ್ನಷ್ಟೆ. ಮೊದಲ ಸರ್ವ್‌ನಲ್ಲಿ 25ರ ಹರೆಯದ ಬೆರೆಟಿನಿ ಶೇ. 76ರಷ್ಟನ್ನು ಪಾಯಿಂಟ್ ಆಗಿ ಪರಿವರ್ತಿಸಿಕೊಂಡರೆ, ಅವರಿಗಿಂತ ಒಂಬತ್ತು ವರ್ಷ ಹಿರಿಯರಾದ ಜೊಕೊವಿಚ್ ಶೇ. 79ರಷ್ಟನ್ನು ಪಾಯಿಂಟ್ ಆಗಿಸಿಕೊಂಡರು. ಸೆಕೆಂಡ್ ಸರ್ವ್ ಮಾಡಿದ ಸಂದರ್ಭಗಳಲ್ಲಿ ಶೇ. 58ರಷ್ಟನ್ನು ಪಾಯಿಂಟ್ ಆಗಿ ಮಾರ್ಪಾಟು ಮಾಡುವಲ್ಲಿ ಜೊಕೊವಿಚ್ ಯಶಸ್ವಿಯಾದರು. ರೋಮ್ ಹುಡುಗ ಈ ವಿಷಯದಲ್ಲಿ ಶೇ. 39ರಷ್ಟು ಮಾತ್ರ ಫಲ ಉಂಡರು. ಬ್ರೇಕ್ ಪಾಯಿಂಟ್ ದಕ್ಕಿಸಿಕೊಳ್ಳುವ ಏಳು ಅವಕಾಶಗಳಲ್ಲಿ ಎರಡು ಬಾರಿಯಷ್ಟೆ ಅವರು ಯಶಸ್ವಿಯಾದದ್ದು. ಜೊಕೊವಿಚ್ ಅಂತಹ 15 ಅವಕಾಶಗಳನ್ನು ಸೃಷ್ಟಿಸಿಕೊಂಡು, ಆರು ಸಲ ಸತ್ಫಲ ಕಂಡರು. ಸರ್ವ್ ಎದುರಿಸಿದ ಸಂದರ್ಭಗಳಲ್ಲಿ 61 ಪಾಯಿಂಟ್‌ಗಳನ್ನು ಸರ್ಬಿಯಾದ ಅನುಭವಿ ಗೆದ್ದರೆ, 38ನ್ನು ಮಾತ್ರ ಎದುರಾಳಿ ಹುಡುಗ ಗೆಲ್ಲಲಾದದ್ದು. ಪಂದ್ಯದಲ್ಲಿ ಒಟ್ಟು 145 ಪಾಯಿಂಟ್‌ಗಳನ್ನು ಜೊಕೊವಿಚ್ ಗೆದ್ದರು. 131